# ಕರ್ನಾಟಕ ಸರ್ಕಾರ

ಸಂಖ್ಯೆ: TOR/36/TDA/2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 05-01-2023

## ಅಧಿಸೂಚನೆ

ಕರ್ನಾಟಕ ಸರ್ಕಾರವು ಪರಿವಿಡಿಯಲ್ಲಿ ವಿವರಿಸಿರುವ ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕಿನ ಐವೂರಿನಲ್ಲಿರುವ ಸ್ವಯಂಭೂ ಸೋಮೇಶ್ವರ (ಬಸವಣ್ಣ) ದೇವಾಲಯದ ಸಂಕೀರ್ಣ/ಪುರಾತನ ಸ್ಮಾರಕಗಳನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961ರ ಕಲಂ 4(3)ರ ಅಡಿ, ರಾಜ್ಯ ಸಂರಕ್ಷಿತ ಸ್ಮಾರಕಗಳನ್ನಾಗಿ ಘೋಷಿಸಲು ಅಭಿಪ್ರಾಯಪಟ್ಟು, ರಾಜ್ಯ ಸಂರಕ್ಷಿತ ಸ್ಮಾರಕಗಳನ್ನಾಗಿ ಘೋಷಿಸಲು ಬಾಧಿತರಾಗುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿತ್ತು. ಈ ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ಪ್ರದೇಶಗಳೆಂದು ಘೋಷಿಸುವ ಬಗ್ಗೆ ಯಾವುದೇ ರೀತಿಯ ಆಕ್ಷೇಪಣೆಗಳು ಸಾರ್ವಜನಿಕರಿಂದ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಶೇಷಗಳು ಅಧಿನಿಯಮ 1961ರ ಕಲಂ 4(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪರಿವಿಡಿಯಲ್ಲಿ ವಿವರಿಸಿರುವ ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕಿನ ಐವೂರಿನಲ್ಲಿರುವ ಸ್ವಯಂಭೂ ಸೋಮೇಶ್ವರ (ಬಸವಣ್ಣ) ದೇವಾಲಯದ ಸಂಕೀರ್ಣ/ಪುರಾತನ ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕಗಳೆಂದು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Vilekshi 05/01/2023

**(ವಿಮಲಾಕ್ಷಿ ಬಿ.)**
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ

**ಇವರಿಗೆ,**

ಇ-ರಾಜ್ಯಪತ್ರದಲ್ಲಿ ಪ್ರಕಟಿಸಲು, ಸಂಕಲನಾಧಿಕಾರಿ, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ಆನ್ ಲೈನ್ ಮೂಲಕ ಸಲ್ಲಿಸಿದೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್ಎಸ್ ಎ) ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು - 560001.
2. ಆಯುಕ್ತರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಆವರಣ, ಮೈಸೂರು.
3. ಜಿಲ್ಲಾಧಿಕಾರಿಗಳು, ಯಾದಗಿರಿ ಜಿಲ್ಲೆ, ಯಾದಗಿರಿ.
4. ತಹಶೀಲ್ದಾರ್, ಸುರಪುರ ತಾಲ್ಲೂಕು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

**<u>ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಒಆರ್ 36 ಟಿಡಿಎ 2022, ದಿನಾಂಕ:05-01-2023ಕ್ಕೆ ಪರಿವಿಡಿ</u>**

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಇರುವ ಸ್ಥಳ | ಸ್ಮಾರಕ/ ಕಟ್ಟಡದ ಹೆಸರು | ಸಂರಕ್ಷಣೆಗೆ ಒಳಪಡುವ ರೆವಿನ್ಯೂ ನಿವೇಶನ ಮತ್ತು ವಿಸ್ತೀರ್ಣ | ಮೇರೆಗಳು (ಚಕ್ಕುಬಂದಿ) | | ಒಡೆತನ | ಷರಾ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | | 8 | 9 |
| 1 | ಯಾದಗಿರಿ | ಸುರಪುರ | ಏವೂರು | ಶ್ರೀ ಸ್ವಯಂಭೂ ಸೋಮೇಶ್ವರ (ಬಸವಣ್ಣ) ಸಂಕೀರ್ಣ | ಸ್ವಯಂಭೂ ಸೋಮೇಶ್ವರ ದೇವಾಲಯ 140-150 (ಮೀ) | ಪೂರ್ವಕ್ಕೆ | ಸರ್ಕಾರಿ ರಸ್ತೆ | ಮುಜರಾಯಿ | ದೇವಾಲಯವು 11ನೇ ಶತಮಾನದಲ್ಲಿ ನಿರ್ಮಾಣವಾಗಿದ್ದು, ಭವ್ಯವಾದ ಸಾಂಸ್ಕೃತಿಕ ಹಾಗೂ ವಿದ್ಯಾ ಕೇಂದ್ರಗಳಿದ್ದು, ಸ್ಮಾರಕ ರಕ್ಷಣೆ ಅವಶ್ಯಕವಾಗಿರುತ್ತದೆ. |
| | | | | | ಹನುಮಾನ ಮಂದಿರ 30-30(ಮೀ) | ಪಶ್ಚಿಮಕ್ಕೆ | ಮನೆಗಳು | | |
| | | | | | ಜಕಣೇಶ್ವರಿ ಬಾವಿ ಪುಷ್ಕರಣಿ 30-30 (ಮೀ) | ಉತ್ತರಕ್ಕೆ | ಖಾಸಗಿ ಜಮೀನು | | |
| | | | | | ಜೈನ ಮಂದಿರ 25-25 (ಮೀ) | ದಕ್ಷಿಣಕ್ಕೆ | ಶಾಂತೇಶ್ವರ ಮಠ | | |

B. Vimala 05/01/2023

(ವಿಮಲಾಕ್ಷಿ ಬಿ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪ್ರವಾಸೋದ್ಯಮ ಇಲಾಖೆ